ಸಿ.ಸಿ.ನಂ.876/2023

ಡಿ.ಡಬ್ಲೂಃ 1

ದಿನಾಂಕಃ 27/11/2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**<u>ಪಾಟೀ ಸವಾಲು ಪಿರ್ಯಾದಿ ಪರ ವಕೀಲರಿಂದ</u>**

1. ನಾನು ಇಂಜಿನಿಯರಿಂಗ್ ಪದವೀದರನಾಗಿರುತ್ತೇನೆ. ನಾನು ಕೆ.ಐ.ಟಿ. ಕಂಪನಿಯ ನಿರ್ದೇಶಕನಾಗಿರುತ್ತೇನೆ. ಸದರಿ ಕಂಪನಿ ಈಗಲೂ ಕೂಡ ಚಾಲ್ತಿಯಲ್ಲಿ ಇದೆ. 2019 ರಿಂದ ಪಿರ್ಯಾದುದಾರರು ನನಗೆ ಗೊತ್ತು. ಪಿರ್ಯಾದುದಾರರು ಆರ್ಥಿಕವಾಗಿ ಚೆನ್ನಾಗಿ ಇದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಪಿರ್ಯಾದುದಾರರು ಪೈನಾನ್ಸ್ ರ್ ಎಂದು ಪರಿಚಯ ಆಗಿರುತ್ತಾರೆ. ನನ್ನ ಮತ್ತು ಪಿರ್ಯಾದುದಾರರ ನಡುವೆ ವೈಮನಸ್ಸು ಇರುವುದಿಲ್ಲ. ಈ ಪ್ರಕರಣವನ್ನು ಪಿರ್ಯಾದುದಾರರು ಯಾವ ಕಾರಣಕ್ಕಾಗಿ ಸಲ್ಲಿಸಿರುತ್ತಾರೆ ಎಂದು ನಾನು ತಿಳಿದುಕೊಂಡಿರುತ್ತೇನೆ.

2. ದಿನಾಂಕ 22.06.2023 ರಂದು ಪಿರ್ಯಾದುದಾರರು ನಿಪಿ-3 ರಂತೆ ನೋಟೀಸ್ಸನ್ನು ಕೊಟ್ಟಿರುತ್ತಾರೆ ಎಂದರೆ ಸರಿ. ಸದರ ನೋಟೀಸ್ಸಿನಲ್ಲಿ ನಾನು ಪಿರ್ಯಾದುದಾರರಿಂದ ದಿನಾಂಕ 07.03.2023 ರಂದು ರೂ.8,75,000/- ಸಾಲವನ್ನು ಪಡೆದುಕೊಂಡಿರುತ್ತೇನೆ ಎಂದು ತಿಳಿಸಿರುತ್ತಾರೆ ಎಂದರೆ ಸುಳ್ಳು. ಪಿರ್ಯಾದುದಾರರು ನೀಡಿದಂತಹ ನಿಪಿ-3 ನೋಟೀಸ್ಸಿಗೆ ನಾನು ಪ್ರತಿಯುತ್ತರ ನೀಡಿರುತ್ತೇನೆ. ನಾನು ನನ್ನ ಪ್ರತಿಯುತ್ತರದಲ್ಲಿ ಪಿರ್ಯಾದುದಾರರು ಮತ್ತು ನನ್ನ ವಿರುದ್ಧ ಯಾವುದೇ ಹಣಕಾಸಿನ ವ್ಯವಹಾರ ನಡೆದಿರುವುದಿಲ್ಲ ಎಂದು ತಿಳಿಸಿರುತ್ತೇನೆ. ಅದೇ ರೀತಿ ಕಂಪನಿಯ ಸಲುವಾಗಿ ರೂ.3,00,000/-ನಗದು ಹಣವನ್ನು ಸಾಲವಾಗಿ ಪಡೆದುಕೊಳ್ಳುವಾಗ ಭದ್ರತೆಗಾಗಿ ಚೆಕ್ಕನ್ನು ನೀಡಿರುತ್ತೇನೆ ಎಂದು ಪ್ರತಿಯುತ್ತರದಲ್ಲಿ ತಿಳಿಸಿರುತ್ತೇನೆ. ನಾನು ಕಂಪನಿಯ ಸಲುವಾಗಿ ಪಿರ್ಯಾದುದಾರರಿಂದ ರೂ.3,00,000/-ಗಳನ್ನು ತೆಗೆದುಕೊಂಡ ಬಗ್ಗೆ ಕಂಪನಿಯ ಮತ್ತೊಬ್ಬ ನಿರ್ದೇಶಕರಿಗೆ ಗೊತ್ತಿದೆ. ಸದರಿ ವಿಷಯವನ್ನು ನಾನು ನಿಪಿ-6 ನನ್ನ ಪ್ರತಿಯುತ್ತರದಲ್ಲಿ ತಿಳಿಸಿರುವುದಿಲ್ಲ.

3. ನಾನು ಕಂಪನಿಯ ಸಲುವಾಗಿ ಪಿರ್ಯಾದುದಾರರಿಂದ ರೂ.3,00,000/-ಗಳನ್ನು ತೆಗೆದುಕೊಳ್ಳುವ ಬಗ್ಗೆ ನಡವಳಿಯನ್ನು ಮಾಡಿರುವುದಿಲ್ಲ ಆದರೆ ಮೌಖಿಕವಾಗಿ ನಾನು ಮತ್ತು ಮತ್ತೊಬ್ಬ ನಿರ್ದೇಶಕರು ಚರ್ಚೆ ಮಾಡಿರುತ್ತೇವೆ. ನಾನು 2019 ರಲ್ಲಿ ಪಿರ್ಯಾದುದಾರರಿಂದ ರೂ.3,00,000/- ಗಳನ್ನು ಕಂಪನಿಯ ಸಲುವಾಗಿ ತೆಗೆದುಕೊಂಡಿರುತ್ತೇನೆ. ಆ ಸಮಯದಲ್ಲಿ ಪಿರ್ಯಾದುದಾರರು ರೂ.3,00,000/- ನಗದಾಗಿ ಕೊಟ್ಟಿದ್ದು ನಾನು ಅವರು ನೀಡಿದಂತಹ 4-5 ಬ್ಯಾಂಕ್ ಖಾತೆ ಗಳಿಗೆ NEFT ಮುಖಾಂತರ ಹಣವನ್ನು ಕಳುಹಿಸಿರುತ್ತೇನೆ. ಸದರಿ 4-5 ಬ್ಯಾಂಕ್ ಖಾತೆಗಳಿಗೆ ಸಂಬಂಧಿಸಿದಂತೆ ನಿಪಿ-6 ರಲ್ಲಿ ತಿಳಿಸಿರುವುದಿಲ್ಲ ಆದರೆ ನಾನು ನ್ಯಾಯಾಲಯಕ್ಕೆ ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ಸದರಿ

4-5 ಬ್ಯಾಂಕ್ ಖಾತೆ ಹೊಂದಿರುವ ಹೆಸರುಗಳನ್ನು ಹೇಳಲು ನೆನಪಿಲ್ಲ. ನಾನು ಹೇಳುವಂತಹ ರೂ.3,00,000/- ಗಳಿಗೆ ಸಂಬಂಧಿಸಿದಂತೆ ಬಡ್ಡಿ ಕೊಡುವುದರ ಬಗ್ಗೆ ಮಾತುಕತೆಯಾಗಿರುವುದಿಲ್ಲ. ಸದರಿ ರೂ.3,00,000/- ಸಂಬಂಧಿಸಿದಂತೆ ಮರುಪಾವತಿ ಮಾಡುವ ಬಗ್ಗೆ ಯಾವುದೇ ಷರತ್ತು ಇರುವುದಿಲ್ಲ. ಸದರಿ ರೂ.3,00,000/- ಗಳನ್ನು ನಾನು ಪಡೆದುಕೊಳ್ಳುವಾಗ ನನ್ನ ಮತ್ತು ಪಿರ್ಯಾದುದಾರರ ನಡುವೆ ಯಾವುದೇ ಕರಾರು ಆಗಿರುವುದಿಲ್ಲ.

4. ನಾನು ಏಪ್ರಿಲ್ 2022 ರಲ್ಲಿ 'ಎಸ್' ಬ್ಯಾಂಕಿನ ಖಾತೆಯನ್ನು ಮುಕ್ತಾಯ ಮಾಡಿರುತ್ತೇನೆ. 2021 ರಲ್ಲಿ ನಾವು 'ಎಸ್' ಬ್ಯಾಂಕ್ ಖಾತೆಯನ್ನು ಮುಕ್ತಾಯ ಮಾಡುತ್ತಿದ್ದೇವೆ ನಮ್ಮ ಚೆಕ್ಕನ್ನು ಹಿಂದಕ್ಕೆ ಕೊಡಿ ಎಂದು ಪಿರ್ಯಾದುದಾರರಿಗೆ ತಿಳಿಸಿರುತ್ತೇವೆ. ಆ ರೀತಿಯಾಗಿ ನಾನು ಪಿರ್ಯಾದುದಾರರಿಗೆ ದೂರವಾಣಿಯ ಮುಖಾಂತರ ತಿಳಿಸಿರುತ್ತೇನೆ. ಪಿರ್ಯಾದುದಾರರು ನಾನು ಹೇಳಿದ ಹಾಗೆ ಚೆಕ್ಕನ್ನು ಹಿಂದಕ್ಕೆ ನೀಡದೇ ಇದ್ದ ಸಮಯದಲ್ಲಿ ಅವರ ವಿರುದ್ಧ ಯಾವುದೇ ಪೋಲೀಸ್ ದೂರನ್ನು ದಾಖಲಿಸಿರುವುದಿಲ್ಲ. ಅದೇ ರೀತಿ ಪಿರ್ಯಾದುದಾರರ ವಿರುದ್ಧ ಕಾನೂನು ಕ್ರಮ ಕೂಡ ಕೈಗೊಂಡಿರುವುದಿಲ್ಲ.

5. ದಿನಾಂಕ 26.06.2018 ರಂದು ನಾನು ನನ್ನ ಬ್ಯಾಂಕ್ ಖಾತೆಯಿಂದ ರೂ.1,00,000/- ಗಳನ್ನು NEFT ಮುಖಾಂತರ ಕಳುಹಿಸಿರುತ್ತೇನೆ. ಆದರೆ ಯಾವ ಬ್ಯಾಂಕ್ ಖಾತೆಗೆ ಕಳುಹಿಸಿರುತ್ತೇನೆ ಎಂದು ಹೇಳಲು ನೆನಪಿಲ್ಲ. ನಾನು 2021 ರಲ್ಲಿ ಪಿರ್ಯಾದುದಾರರಿಗೆ ರೂ.50,000/- ನಗದು ಹಣವನ್ನು ಕೊಟ್ಟಿರುತ್ತೇನೆ. ಯಾವ ದಿನದಂದು ಕೊಟ್ಟಿರುತ್ತೇನೆ ಎಂದು ಹೇಳಲು ನಿಖರವಾಗಿ ಗೊತ್ತಿಲ್ಲ. ನಾನು ಹೇಳಿದ ಹಾಗೆ ರೂ.50,000/- ಗಳನ್ನು ಪಿರ್ಯಾದುದಾರರಿಗೆ ಕೊಟ್ಟಿರುವ ಬಗ್ಗೆ ಅವರಿಂದ ಯಾವುದೇ ರಸೀದಿಯನ್ನು ಪಡೆದುಕೊಂಡಿರುವುದಿಲ್ಲ. ಅದೇ ರೀತಿ ದಿನಾಕ 26.08.2020, 28.09.2020, 05.11.2020, 11.12.2020 ಮತ್ತು 15.01.2021 ರಂದು ನನ್ನ ಹೆಚ್.ಡಿ.ಎಫ್.ಸಿ. ಬ್ಯಾಂಕ್ ಖಾತೆಯಿಂದ ಪಿರ್ಯಾದುದಾರರ ಮಗನ ಬ್ಯಾಂಕ್ ಖಾತೆಗೆ ತಲಾ ರೂ.25,000/- ಗಳಂತೆ ಕಳುಹಿಸಿರುತ್ತೇನೆ. ಆ ರೀತಿಯಾಗಿ ಪಿರ್ಯಾದುದಾರರ ಮಗನ ಬ್ಯಾಂಕ್ ಖಾತೆಗೆ ಕಳುಹಿಸಿದ ಬಗ್ಗೆ ನಾನು ನಿಪಿ-6 ರಲ್ಲಿ ತಿಳಿಸಿರುತ್ತೇನೆ. ನಿಡಿ-1 ಸ್ಟೇಟ್ ಮೆಂಟಿನ ಪ್ರಕಾರ ನಾನು ಹೇಳಿದ ಹಾಗೆ ಪಿರ್ಯಾದುದಾರರ ಮಗನ ಬ್ಯಾಂಕ್ ಖಾತೆಗೆ ದಿನಾಂಕ 28.09.2020 ಮತ್ತು 15.01.2021 ರಂದು ಯಾವುದೇ ಹಣ ವರ್ಗಾವಣೆಯಾಗಿರುವುದಿಲ್ಲ ಎಂದರೆ ಸುಳ್ಳು. ನಾನು ಒಟ್ಟು ರೂ.2,85,000/- ಗಳನ್ನು ಬ್ಯಾಂಕ್ ಖಾತೆಯ ಮುಖಾಂತರ ಪಿರ್ಯಾದುದಾರರಿಗೆ ಮರುಪಾವತಿ ಮಾಡಿರುತ್ತೇನೆ. ನಾನು ಹೇಳಿದ ಹಾಗೆ ರೂ.2,85,000/- ಗಳನ್ನು ಬ್ಯಾಂಕ್ ಖಾತೆಯ ಮುಖಾಂತರ ಪಿರ್ಯಾದುದಾರರಿಗೆ ಮರುಪಾವತಿ ಮಾಡಿರುವುದಿಲ್ಲ ಎಂದರೆ ಸುಳ್ಳು. ದಿನಾಂಕ 08.04.2021 ರಂದು ಕಳುಹಿಸಿರುವಂತಹ ರೂ.30,450/- ಗಳನ್ನು ನಾನು

ಫ್ರಾಪಿಟ್ ಶೇರಿಂಗ್ ಎಂದು ಪಿರ್ಯಾದುದಾರರಿಗೆ ಕಳುಹಿಸಿರುತ್ತೇನೆ. ನಾನು ರೂ.30,450/- ಗಳನ್ನು ಫ್ರಾಪಿಟ್ ಶೇರಿಂಗ್ ಎಂದು ಕಳುಹಿಸಿರುವ ಬಗ್ಗೆ ನಿಪಿ-6 ರಲ್ಲಿ ತಿಳಿಸಿರುವುದಿಲ್ಲ. ನಾನು 2021 ರಲ್ಲಿ ಪಿರ್ಯಾದುದಾರರಿಗೆ ಚೆಕ್ಕನ್ನು ಹಿಂತಿರುಗಿಸಲು ಕೇಳಿರುತ್ತೇನೆ. ಆ ಸಮಯದಲ್ಲಿ ಪಿರ್ಯಾದುದಾರರು ಅಂಚೆ ಮುಖಾಂತರ ಚೆಕ್ಕನ್ನು ಕಳುಹಿಸುತ್ತೇನೆ ಎಂದು ತಿಳಿಸಿದ್ದರು. ಪಿರ್ಯಾದುದಾರರು ತಿಳಿಸಿದ ಹಾಗೆ ಅಂಚೆ ಮುಖಾಂತರ ಚೆಕ್ಕನ್ನು ಕಳುಹಿಸದೇ ಇದ್ದ ಸಮಯದಲ್ಲಿ ನಾನು ಆತನ ವಿರುದ್ಧ ಪೋಲೀಸ್ ಠಾಣೆಯಲ್ಲಿ ದೂರನ್ನು ದಾಖಲಿಸಿರುವುದಿಲ್ಲ ಮತ್ತು ಕಾನೂನು ಕ್ರಮ ಕೈಗೊಂಡಿರುವುದಿಲ್ಲ.

6. ನಿಪಿ-1 ಚೆಕ್ಕನ್ನು ನಾನು ಸಹಿ ಮಾಡಿ ಕೊಟ್ಟಿರುತ್ತೇನೆ. ನಾನು ಪಿರ್ಯಾದುದಾರರಿಗೆ ಸಹಿ ಮಾಡಿದ ಖಾಲಿ ಚೆಕ್ಕನ್ನು ಕೊಟ್ಟಿರುವ ಬಗ್ಗೆ ನಿಪಿ-6 ರಲ್ಲಿ ತಿಳಿಸಿರುತ್ತೇನೆ. ನಾನು ನನ್ನ ಪ್ರತಿಯುತ್ತರದಲ್ಲಿ ಪಿರ್ಯಾದುದಾರರಿಗೆ ಸಹಿ ಮಾಡಿದ ಖಾಲಿ ಚೆಕ್ಕನ್ನು ಕೊಟ್ಟಿರುತ್ತೇನೆ ಎಂದು ತಿಳಿಸಿರುವುದಿಲ್ಲ ಎಂದರೆ ಸುಳ್ಳು. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿದ್ದು ಸದರಿ ದಾಖಲೆ ತಮ್ಮ ಕಂಪನಿಗೆ ಸಂಬಂಧಿಸಿದ ಲೆಟರ್ ಹೆಡ್ ಎಂದು ಹಾಗೂ ಅದರಲ್ಲಿ ಇರುವ ಸಹಿ ತನ್ನ ಸಹಿ ಎಂದು ಒಪ್ಪಿದ್ದ ಮೇರೆಗೆ ಸದರಿ ದಾಖಲೆಯನ್ನು ನಿಪಿ-7 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು. ದಿನಾಂಕ 07.03.2023 ರಂದು ಪಿರ್ಯಾದುದಾರರಿಂದ ನಮ್ಮ ಕಂಪನಿಯ ಅಭಿವೃದ್ಧಿಯ ಸಲುವಾಗಿ ರೂ.8,75,000/- ಗಳನ್ನು ಸಾಲವಾಗಿ ಪಡೆದುಕೊಂಡ ಬಗ್ಗೆ ನಿಪಿ-1 ಚೆಕ್ಕನ್ನು ನೀಡಿರುತ್ತೇನೆ ಎಂದರೆ ಸುಳ್ಳು. ನಿಪಿ-1 ಚೆಕ್ಕನ್ನು ನೀಡಿದ ದಿನವೇ ನಾನು ನಿಪಿ-7 ರಂತೆ ಹಿಂಬರಹವನ್ನು ಪಿರ್ಯಾದುದಾರರಿಗೆ ಬರೆದುಕೊಟ್ಟಿರುತ್ತೇನೆ ಎಂದರೆ ಸುಳ್ಳು.

**(ಮುಂದುವರೆದ ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿರುವುದರಿಂದ ಪಾಟೀ ಸವಾಲು ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

(ಜಯಲಕ್ಷ್ಮೀ ಎನ್. ಬಿ)
ಪ್ರಧಾನ ಹಿರಿಯ ಸಿ.ಜೆ. ಮತ್ತು ಜೆಎಂಎಫ್‌ಸಿ
ಕೆಜಿಎಫ್